C.R.P.67

Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No. 2/2024 ಪಿ.ಡಬ್ಲ್ಯೂ-1 ಸಿ.ಡಬ್ಲ್ಯೂ-1

ದಿನಾಂಕಃ- 27.01.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಶ್ರೀಮತಿ. ರಮ್ಯ ಹೆಚ್. ಡಿ. |
| ಗಂಡನ ಹೆಸರು | ಪ್ರದೀಪ್ ಕುಮಾರ್ . ಜಿ |
| ವಯಸ್ಸು | 33 ವರ್ಷ |
| ಉದ್ಯೋಗ | ಅಬಕಾರಿ ನಿರೀಕ್ಷಕರು,<br>ಅರಸೀಕೆರೆ ವಲಯ, |
| ವಾಸ | ಅರಸೀಕೆರೆ<br>ಹಾಸನ ಜಿಲ್ಲೆ. |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು 01.02.2021 ರಿಂದ 28.8.2024 ರವರೆಗೆ ಶ್ರೀರಂಗಪಟ್ಟಣ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕೆಲಸ ಮಾಡಿದ್ದೇನೆ.

2. ದಿಃ 19.04.2023 ರಂದು ನಾನು ಕಛೇರಿಯಲ್ಲಿ ಇದ್ದಾಗ ಮಧ್ಯಾಹ್ನ 12.30 ಗಂಟೆ ಸುಮಾರಿಗೆ ಬಾತ್ಮಿದಾರರು ಶ್ರೀರಂಗಪಟ್ಟಣ ತಾಲ್ಲೂಕು ಬೆಳಗೊಳ ಹೋಬಳಿ ಪಾಲಹಳ್ಳಿ ಗ್ರಾಮದ ರಾಜೇಂದ್ರ ಮತ್ತು ಗಿರೀಶ ರವರು ತಮ್ಮ ಮನೆಯ ಹಿಂಭಾಗದಲ್ಲಿ ಇರುವ ಜಮೀನಿನಲ್ಲಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆದಿದ್ದಾರೆ ಎಂದು ಸುದ್ದಿ ಬಂದಿತು. ನಾನು ನನಗೆ ಬಂದ ಸುದ್ದಿಯನ್ನು ದಾಖಲಿಸಿ, ವರದಿಯನ್ನು ತಯಾರಿಸಿ ಸದರಿ ವರದಿಯ ಆಧಾರದ ಮೇಲೆ 101/2022-2023 ನೇ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ.

3. ನಾನು ಪ್ರಥಮ ವರ್ತಮಾನ ವರದಿಯನ್ನು ಕಳುಹಿಸಿದ ನಂತರ ನನಗೆ ಬಂದ ಸುದ್ದಿಯನ್ನು ಅಬಕಾರಿ DYSP ರವರಿಗೆ ತಿಳಿಸಿ ದಾಳಿ ನಡೆಸಲು ಪರವಾನಗಿ ಪಡೆದೆನು. ಆನಂತರ ನಮ್ಮ ಕಛೇರಿಯಲ್ಲಿ ಇದ್ದ ಸಿಬ್ಬಂದಿಯ ಮೂಲಕ ಕಛೇರಿಯ ಮುಂಭಾಗದಲ್ಲಿ ಹಾಜರಿದ್ದ ಮಧುಸೂದನ ಮತ್ತು ಗಿರೀಶ ರವರಿಗೆ ಪಂಚರಾಗಿ ಕೆಲಸ ಮಾಡುವಂತೆ ನೋಟೀಸು ಕೊಟ್ಟು ಕೇಳಿಕೊಂಡೆನು. ನಾನು ಪಂಚರಾಗಿ ಕೆಲಸ ಮಾಡುವಂತೆ ಪಾಲಹಳ್ಳಿ ವೃತ್ತದ ಗ್ರಾಮ ಸಹಾಯಕರಾದ ಬೆಟ್ಟಯ್ಯ ರವರಿಗೆ ನೋಟೀಸು ಕೊಟ್ಟು ಕೇಳಿಕೊಂಡೆನು.

4. ಆನಂತರ ಮೇಲೆ ಹೇಳಿದ ಪಂಚರು, ನಮ್ಮ ಕಛೇರಿಯ ಸಿಬ್ಬಂದಿಯ ಜೊತೆಯಲ್ಲಿ ಮಧ್ಯಾಹ್ನ 2.00 ಗಂಟೆ ಸಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ ಮಾಲೀಕತ್ವಕ್ಕೆ ಸೇರಿದ ಸ.ನಂ.273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದಲ್ಲಿ ಇರುವ ಜಾಗಕ್ಕೆ ಹೋಗಿ ತನಿಖೆ ಮಾಡಿದಾಗ 23 ಗಾಂಜಾ ಗಿಡಗಳು ಬೆಳೆದಿರುದು ಕಾಣಿಸಿತು ಮತ್ತು 2 ಗಿಡಗಳನ್ನು ಕಿತ್ತು ಇಟ್ಟಿರುವುದು ಕಾಣಿಸಿತು. ಸ್ಥಳದಲ್ಲಿ ಇದ್ದ ನಾಗೇಂದ್ರ ಮತ್ತು ಗಿರೀಶ ರವರನ್ನು ವಿಚಾರಿಸಿದಾಗ ಗಾಂಜಾ ಗಿಡಗಳನ್ನು ಬೆಳೆಸಲು ಪರವಾನಗಿ ಇಲ್ಲ ಎಂದು ಹೇಳಿದರು.

5. ಆನಂತರ ನಮ್ಮ ಜೊತೆಯಲ್ಲಿ ಇದ್ದ ಪಂಚರ ಸಮಕ್ಷಮ ಸಿಬ್ಬಂದಿಯ ಮೂಲಕ ಜಮೀನಿನಲ್ಲಿ ಬೆಳೆದಿದ್ದ 23 ಗಾಂಜಾ ಗಿಡಗಳನ್ನು ಕೀಳಿಸಿದೆನು. ನಾನು ಸ್ಥಳದಲ್ಲಿ ಸಿಕ್ಕಿದ ಮತ್ತು ಕಿಳಿಸಿದ 25 ಗಾಂಜಾ ಗಿಡಗಳನ್ನು ಪಂಚರ ಸಮಕ್ಷಮ ಮಹಜರು ಬರೆದು ವಶಪಡಿಸಿಕೊಂಡೆನು. ನಾನು ಸ್ಥಳದಲ್ಲಿ ಸಿಕ್ಕಿದ ನಾಗೇಂದ್ರ ಮತ್ತು ಗಿರೀಶ ರವರನ್ನು ಹಿಡಿದುಕೊಂಡು ಸಿಬ್ಬಂದಿಯ ಜೊತೆಯಲ್ಲಿ ನಮ್ಮ ಕಛೇರಿಗೆ ವಾಪಸ್ಸು ಬಂದೆನು.

6. ಈ ಸಾಕ್ಷಿ ಕಡತದಲ್ಲಿ ಇರುವ

1. 19.04.2023 ನೇ ದಿವಸದ ಪ್ರಥಮ ವರ್ತಮಾನ ವರದಿ,
2. 19.04.2023 ನೇ ದಿವಸದ ಸ್ವಂತ ಹೇಳಿಕೆ ದಾಖಲೆ,
3. 19.04.2023 ನೇ ದಿವಸದ ವರದಿ,
4. 19.04.2023 ನೇ ದಿವಸದ ಮಹಜರು,
5. 19.04.2023 ನೇ ದಿವಸದಂದು ವಶಪಡಿಸಿಕೊಂಡ ವಸ್ತುಗಳ ಪಟ್ಟಿ

6. 19.04.2023 ರಂದು DYSP ರವರಿಗೆ ಕಳುಹಿಸಿದ ಪತ್ರ,

7. 19.04.2023 ನೇ ದಿವಸದ search warrant

8. 19.04.2023 ರಂದು ಬೆಟ್ಟಯ್ಯ ನವರಿಗೆ ಕೊಟ್ಟಿರುವ ನೋಟೀಸು

9. 19.04.2023 ರಂದು ವಶಪಡಿಸಿಕೊಂಡ ವಸ್ತುಗಳ ಎರಡನೇ ಪಟ್ಟಿ

10. 19.04.2023 ರಂದು ಗಿರೀಶ ರವರಿಗೆ ಕೊಟ್ಟಿರುವ ನೋಟೀಸು

11. 19.04.2023 ರಂದು ಮಧುಸೂದನ ರವರಿಗೆ ಕೊಟ್ಟಿರುವ ನೋಟೀಸು

12. 19.04.2023 ನೇ ದಿವಸದ ಮಾದರಿ ಸೀಲಿನ ನಕಲು

13. 19.04.2023 ರಂದು ಪಾಲಹಳ್ಳಿ PDO ರವರಿಗೆ ಕೊಟ್ಟಿರುವ ನೋಟೀಸುಗಳ ಮೇಲೆ ತನ್ನ ಸಹಿಗಳು ಇರುವುದನ್ನು ಗುರುತಿಸಿದ್ದಾರೆ.

7. ಈ ಸಾಕ್ಷಿಯ ಸಹಿ ಇರುವ ಮೇಲೆ ವಿವರಿಸಿದ ದಾಖಲೆಗಳನ್ನು ನಿಪಿ-1 ರಿಂದ 13 ರವರಗೆ ಮತ್ತು ಈ ಸಾಕ್ಷಿಯ ಸಹಿಗಳನ್ನು ನಿಪಿ-1(ಎ), 2(ಎ), 3(ಎ), 4(ಎ), 5(ಎ), 6(ಎ), 7(ಎ), 8(ಎ), 9(ಎ), 10(ಎ), 11(ಎ), 12(ಎ) ಮತ್ತು 13(ಎ) ಎಂದು ಗುರುತಿಸಲಾಯಿತು.

8. 19.04.2023 ರಂದು ಆರೋಪಿತರನ್ನು ವೈದ್ಯರಿಂದ ಪರೀಕ್ಷೆ ಮಾಡಿಸಿ ನ್ಯಾಯಾಲಯದ ಸಮಕ್ಷಮ ಹಾಜರು ಪಡಿಸಿದ್ದೇನೆ.

9. ನಾನು 19.04.2023 ರಂದು ವಶಪಡಿಸಿಕೊಂಡಿದ್ದ ಗಾಂಜಾ ವಸ್ತುಗಳನ್ನು ಇನ್ವೆಂಟರಿ ಮಾಡಿಕೊಡುವಂತೆ 25.05.2023 ರಂದು ಶ್ರೀರಂಗಪಟ್ಟಣ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರಿಗೆ ವಿನಂತಿ ಪತ್ರ ಕಳುಹಿಸಿದ್ದೇನೆ. ನನ್ನ ವಿನಂತಿ ಪ್ರಕಾರ 25.05.2023 ರಂದು ಶ್ರೀರಂಗಪಟ್ಟಣ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರು ಇನ್ವೆಂಟರಿ ಮಾಡಿ, ಫೋಟೋ ತೆಗೆಸಿ Annexure-I, ಇನ್ವೆಂಟರಿ ಪ್ರಮಾಣ ಪತ್ರಗಳನ್ನು ನನಗೆ ಕಳುಹಿಸಿದ್ದಾರೆ. ನ್ಯಾಯಾದೀಶರು ಇನ್ವೆಂಟರಿ ಮಾಡಿದಾಗ ನಾನು ಮತ್ತು ನನ್ನ ಸಿಬ್ಬಂದಿ ಹಾಜರಿದ್ದೆವು.

10. ಈ ಸಾಕ್ಷಿ ಕಡತದಲ್ಲಿರುವ

1. 25.05.2023 ರಂದು ನ್ಯಾಯಾಧೀಶರಿಗೆ ಕಳುಹಿಸಿದ ಪತ್ರ ಅಡಕಗಳ ಜೊತೆಯಲ್ಲಿ,

2. 25.05.2023 ರಂದು ಶ್ರೀರಂಗಪಟ್ಟಣ ನ್ಯಾಯಾಧೀಶರು ಇನ್ವೆಂಟರಿ ಮಾಡಿ ಕಳುಹಿಸಿದ ವರದಿ,

3. ಮಾದರಿ ಸೀಲಿನ ನಕಲು ಗಳನ್ನು ಗುರುತಿಸಿದ್ದಾರೆ.

11. ಈ ಸಾಕ್ಷಿ ಮೇಲೆ ಹೇಳಿದಂತೆ ಗುರುತಿಸಿದ ದಾಖಲೆಗಳನ್ನು ನಿಪಿ.14 ರಿಂದ 16 ರವರೆಗೆ ಗುರುತಿಸಲಾಯಿತು. ಈ ಸಾಕ್ಷಿ ನಿಪಿ–14 ಮತ್ತು 16 ರಲ್ಲಿ ಗುರುತಿಸಿರುವ ದಾಖಲೆಗಳಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿಗಳನ್ನು ನಿಪಿ.14(ಎ) ಮತ್ತು 16(ಎ) ಎಂದು ಗುರುತಿಸಲಾಯಿತು.

12. ಈ ಸಾಕ್ಷಿ ಕಡತದಲ್ಲಿರುವ 19 ಫೋಟೋಗಳನ್ನು ನ್ಯಾಯಾಧೀಶರು ತಮ್ಮ ಕೊಠಡಿಯಲ್ಲಿ ಇನ್ವೆಂಟರಿ ಚಟುವಟಿಕೆ ನಡೆಸಿದಾಗ ತೆಗೆಸಿದ ಫೋಟೋಗಳು ಎಂದು ಗುರುತಿಸಿದ್ದಾರೆ. ಈ ಸಾಕ್ಷಿ ಮೇಲೆ ಹೇಳಿದಂತೆ ಗುರುತಿಸಿದ 19 ಫೋಟೋಗಳನ್ನು ಒಟ್ಟಿಗೆ ನಿಪಿ–17 ಎಂದು ಗುರುತಿಸಲಾಯಿತು.

13.ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ದಿಃ19.04.2023 ರಂದು ಮಧ್ಯಾಹ್ನ 2.00 ಗಂಟೆಗೆ ಪಾಲಹಳ್ಳಿ ಗ್ರಾಮದಲ್ಲಿ ಸ.ನಂ.273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದ ಜಮೀನಿನಲ್ಲಿ ಹಿಡಿದಿದ್ದೆನು.

14.ನ್ಯಾಯಾಧೀಶರು ಇನ್ವೆಂಟರಿ ಮಾಡಿದಾಗ ನಾನು ವಶಪಡಿಸಿಕೊಂಡ ವಸ್ತುಗಳ ಒಟ್ಟು ತೂಕ 1300 ಗ್ರಾಂ ಬಂದಿತು. ಸದರಿ 1300 ಗ್ರಾಂ ಗಾಂಜಾ ವಸ್ತುವಿನಲ್ಲಿ FSL ಕಛೇರಿಗೆ ಕಳುಹಿಸಲು 20 ಗ್ರಾಂ ತೂಕದ ವಸ್ತುವನ್ನು ಪ್ರತ್ಯೇಕ ಮಾಡಿ ಬಟ್ಟೆಯ ಗಂಟು ಕಟ್ಟಿ ಸೀಲು ಮಾಡಲಾಯಿತು. ಉಳಿಕೆ 1280 ಗ್ರಾಂ ತೂಕದ ವಸ್ತುವನ್ನು ಪ್ರತ್ಯೇಕ ಮಾಡಿ ಬಟ್ಟೆಯ ಗಂಟು ಕಟ್ಟಿ ಸೀಲು ಮಾಡಲಾಯಿತು.

15. 1280 ಗ್ರಾಂ ತೂಕದ ವಸ್ತುವನ್ನು ತುಂಬಿ ಕಟ್ಟಿದ್ದ ಗಂಟನ್ನು 30.05.2023 ರಂದು ಮಂಡ್ಯ drug disposal committee ಗೆ ಕೊಟ್ಟು ರಶೀದಿಯನ್ನು ಪಡೆದಿದ್ದೇನೆ.

16. ಈ ಸಾಕ್ಷಿ ಕಡತದಲ್ಲಿ ಇರುವ 30.05.2023 ನೇ ದಿನಾಂಕದಂದು ಮಂಡ್ಯ drug disposal committee ರವರಿಗೆ ಕಳುಹಿದ ಪತ್ರ ಮತ್ತು ಅದರ ಜೊತೆಯಲ್ಲಿ ಇರುವ ರಶೀದಿಯನ್ನು ಗುರುತಿಸಿದ್ದಾರೆ. ಈ ಸಾಕ್ಷಿ ಮೇಲೆ ಹೇಳಿದಂತೆ ಗುರುತಿಸಿದ ದಾಖಲೆಗಳನ್ನು ನಿಪಿ.18 ಮತ್ತು 19 ಎಂದು ಗುರುತಿಸಲಾಯಿತು. ಈ ಸಾಕ್ಷಿ ನಿಪಿ.18 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿಯನ್ನು ನಿಪಿ.18(ಎ) ಎಂದು ಗುರುತಿಸಲಾಯಿತು.

17. ನಾನು 30.05.2023 ರಂದು ಈ ಪ್ರಕರಣದ ಕಡತವನ್ನು ಚಾಸಾ-9 ನೇ ಪಾಂಡವಪುರ ಅಬಕಾರಿ ಉಪ ನಿರೀಕ್ಷಕರಾಗಿದ್ದ ರಮೇಶ ರವರ ಕೈಗೆ ಕೊಟ್ಟಿದ್ದೇನೆ.

<u>ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ. ಸಿ. ಮೂರ್ತಿ ವಕೀಲರಿಂದಃ-</u>

1. ದಿಃ 19.04.2023 ರಂದು ನಾನು ಕಛೇರಿಯಲ್ಲಿ ಇದ್ದಾಗ ಮಧ್ಯಾಹ್ನ 12.30 ಗಂಟೆ ಸುಮಾರಿಗೆ ಬಾತ್ಮಿದಾರರು ಶ್ರೀರಂಗಪಟ್ಟಣ ತಾಲ್ಲೂಕು ಬೆಳಗೊಳ ಹೋಬಳಿ ಪಾಲಹಳ್ಳಿ ಗ್ರಾಮದ ರಾಜೇಂದ್ರ ಮತ್ತು ಗಿರೀಶ ರವರು ತಮ್ಮ ಮನೆಯ ಹಿಂಭಾಗದಲ್ಲಿ ಇರುವ ಜಮೀನಿನಲ್ಲಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆದಿದ್ದಾರೆ ಎಂದು ಸುದ್ದಿ ಬಂದಿತು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

2. ನಾನು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎನ್ನುವುದು ಸರಿಯಲ್ಲ.

3. ನಾನು ನಮ್ಮ ಕಛೇರಿಯಲ್ಲಿ ಇದ್ದ ಸಿಬ್ಬಂದಿಯ ಮೂಲಕ ಕಛೇರಿಯ ಮುಂಭಾಗದಲ್ಲಿ ಹಾಜರಿದ್ದ ಮಧುಸೂದನ ಮತ್ತು ಗಿರೀಶ ರವರಿಗೆ ಪಂಚರಾಗಿ ಕೆಲಸ

ಮಾಡುವಂತೆ ನೋಟೀಸು ಕೊಟ್ಟು ಕೇಳಿಕೊಂಡೆನು, ಮತ್ತು ಪಂಚರಾಗಿ ಕೆಲಸ ಮಾಡುವಂತೆ ಪಾಲಹಳ್ಳಿ ವೃತ್ತದ ಗ್ರಾಮ ಸಹಾಯಕರಾದ ಬೆಟ್ಟಯ್ಯ ರವರಿಗೆ ನೋಟೀಸು ಕೊಟ್ಟು ಕೇಳಿಕೊಂಡೆನು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

4. ಆನಂತರ ಮೇಲೆ ಹೇಳಿದ ಪಂಚರು, ನಮ್ಮ ಕಛೇರಿಯ ಸಿಬ್ಬಂದಿಯ ಜೊತೆಯಲ್ಲಿ ಮಧ್ಯಾಹ್ನ 2.00 ಗಂಟೆ ಸಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ ಮಾಲೀಕತ್ವಕ್ಕೆ ಸೇರಿದ ಸ.ನಂ. 273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದಲ್ಲಿ ಇರುವ ಜಾಗಕ್ಕೆ ಹೋಗಿ ತನಿಖೆ ಮಾಡಿದಾಗ 23 ಗಾಂಜಾ ಗಿಡಗಳು ಬೆಳೆದಿರುದು ಕಾಣಿಸಿತು ಮತ್ತು 2 ಗಿಡಗಳನ್ನು ಕಿತ್ತು ಇಟ್ಟಿರುವುದು ಕಾಣಿಸಿತು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

5. ಆನಂತರ ನಮ್ಮ ಜೊತೆಯಲ್ಲಿ ಇದ್ದ ಪಂಚರ ಸಮಕ್ಷಮ ಸಿಬ್ಬಂದಿಯ ಮೂಲಕ ಜಮೀನಿನಲ್ಲಿ ಬೆಳೆದಿದ್ದ 23 ಗಾಂಜಾ ಗಿಡಗಳನ್ನು ಕೀಳಿಸಿದೆನು, ನಾನು ಸ್ಥಳದಲ್ಲಿ ಸಿಕ್ಕಿದ ಮತ್ತು ಕಿಳಿಸಿದ 25 ಗಾಂಜಾ ಗಿಡಗಳನ್ನು ಪಂಚರ ಸಮಕ್ಷಮ ಮಹಜರು ಬರೆದು ವಶಪಡಿಸಿಕೊಂಡೆನು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

6. ನಾನು ನ್ಯಾಯಾಲಯದ ಸಿಬ್ಬಂದಿಯ ಸಹಾಯದಿಂದ ಇನ್ವೆಂಟರಿ ದಾಖಲೆಗಳನ್ನು ಮತ್ತು ಫೋಟೋಗಳನ್ನು ಸೃಷ್ಟಿಸಿದ್ದೇನೆ ಎನ್ನುವುದು ಸರಿಯಲ್ಲ.

7. ನಾನು ವಶಪಡಿಸಿಕೊಂಡಿದ್ದೇನೆ ಎಂದು ಹೇಳುತ್ತಿರುವ ಗಾಂಜಾ ಗಿಡಗಳಿಗೂ ಮತ್ತು ಆರೋಪಿತರಿಗೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ನಾನು ತನ್ನ ಮನೆಯ ಹತ್ತಿರ ಇದ್ದ ಆರೋಪಿತರನ್ನು ಕಛೇರಿಗೆ ಕರೆದುಕೊಂಡು ಬಂದು ಅವರುಗಳ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎನ್ನುವುದು ಸರಿಯಲ್ಲ. ನಾನು ಈಗ ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

8. ಪಾಲಹಳ್ಳಿ ಗ್ರಾಮದ ಸ.ನಂ. 273/1 ನೇ ಜಮೀನಿನ 2023–24 ನೇ ಸಾಲಿನ ಪಹಣಿಯ 12 ನೇ ಕಾಲಂ ನಲ್ಲಿ ಹೈಬ್ರಿಡ್ ಭತ್ತ ಬೆಳೆಯಲಾಗಿದೆ ಎಂದು ಬರೆದಿದೆ ಎನ್ನುವುದು ನಿಜ.

<u>ಮರು ವಿಚಾರಣೆಃ– ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–</u>

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜಿ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.